**ಸರ್ವ ಶಿಕ್ಷಣ ಅಭಿಯಾನ ಸಮಿತಿ- ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು**

ಸಂ.ಸಶಿಅ/ಸಿಎಎಲ್‌ಸಿ/2009-10 27.07.2009.

**ಸುತ್ತೋಲೆ**

ವಿಷಯ: ಕಂಪ್ಯೂಟರ್ ಕಲಿಕಾ ಕೇಂದ್ರ (ಸಿ.ಎ.ಎಲ್.ಸಿ) ಗಳ ಕಾರ್ಯನಿರ್ವಹಣೆ ಕುರಿತು.

***

ಪ್ರತಿ ಕ್ಲಸ್ಟರ್‌ನ ಒಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಸಹಾಯಿತ ಕಲಿಕಾ ಕೇಂದ್ರಗಳನ್ನು ಸರ್ವ ಶಿಕ್ಷಣ ಅಭಿಯಾನದ ಆವಿಷ್ಕೃತ ಚಟುವಟಿಕೆಡಿಯಲ್ಲಿ ಪ್ರಾರಂಭಿಸಲಾಗಿದೆ. ಇದು ಕಂಪ್ಯೂಟರ್ ಶಿಕ್ಷಣದೊಂದಿಗೆ ಕಂಪ್ಯೂಟರ್‌ನ ಸಹಾಯದಿಂದ ಮಕ್ಕಳ ವಿಷಯ ಕಲಿಕೆಯ ಮಟ್ಟ ಹೆಚ್ಚಿಸುವ ಗುರಿ ಹೊಂದಿದೆ. ಶಾಲಾ ಪಠ್ಯಕ್ರಮಕ್ಕೆ ಸಂಬಂಧಪಟ್ಟ ಶೈಕ್ಷಣಿಕ ಸಿ.ಡಿ.ಗಳನ್ನು ಕಂಪ್ಯೂರ್‌ಗಳ ಮೂಲಕ ಮಕ್ಕಳೇ ಸ್ವತಃ ಬಳಸುವುದರ ಮೂಲಕ ಪರಿಣಾಮಕಾರಿ ಕಲಿಕೆಗೆ ಸಹಾಯಕವಾಗುತ್ತದೆ.

**ಕಂಪ್ಯೂಟರ್ ಕಲಿಕಾ ಕೇಂದ್ರಗಳಲ್ಲಿ ತರಗತಿ ನಿರ್ವಹಣೆ:**

- ಪ್ರತಿ ತರಗತಿಯ ಮಕ್ಕಳ ಗುಂಪುಗಳಿಗೆ ಪ್ರತಿ ವಾರ ಕನಿಷ್ಠ ಎರಡು ಅವಧಿಗಳನ್ನು ಕಂಪ್ಯೂಟರ್ ಸಹಾಯಿತ ಕಲಿಕೆಗೆ ಲಭ್ಯವಾಗುವಂತೆ ವೇಳಾಪಟ್ಟಿಯನ್ನು ರಚಿಸಿ, ಅದನ್ನು ಕಂಪ್ಯೂಟರ್ ಕೇಂದ್ರದಲ್ಲಿ ಪ್ರದರ್ಶಿಸಬೇಕು.
- ಮಕ್ಕಳು ಗುಂಪಿನಲ್ಲಿ ಕಂಪ್ಯೂಟರ್ ಬಳಸುವಾಗ ಪ್ರತಿ ಮಗುವಿಗೂ ಅವಕಾಶ ಸಿಗುವಂತೆ ನೋಡಿಕೊಳ್ಳಬೇಕು ಮತ್ತು ಪ್ರತಿ ಗುಂಪಿನಲ್ಲಿ ಇರಬೇಕಾದ ಅಪೇಕ್ಷಿತ ಮಕ್ಕಳ ಸಂಖ್ಯೆ 3 ರಿಂದ 5.
- ತರಗತಿಯಲ್ಲಿ ವಿಷಯವನ್ನು ಬೋಧಿಸಿದ ಮೇಲೆ ಅದಕ್ಕೆ ಸಂಬಂಧಿಸಿದ ಸಿ.ಡಿ.ವೀಕ್ಷಣೆಗೆ ಪೂರಕ ಕಲಿಕೆಗೆ ಅವಕಾಶ ಮಾಡಿಕೊಡಬೇಕು. ಶಿಕ್ಷಕರು ಒದಗಿಸಲಾದ ಕಂಪ್ಯೂಟರ್ ಪಾಠಗಳನ್ನು ಪೂರ್ವಭಾವಿಯಾಗಿ ವೀಕ್ಷಿಸಿ ಯಾವ ವಿಷಯಕ್ಕೆ ಸಂಬಂಧಿಸಿದ ಪಾಠಗಳನ್ನು ನೀಡಲಾಗಿದೆ ಎಂಬ ಕುರಿತು ಪಟ್ಟಿಯನ್ನು ಸಿದ್ಧಪಡಿಸಿಕೊಂಡು, ಸಂಬಂಧಿಸಿದ ತರಗತಿಗಳಿಗೆ ಸೂಕ್ತವಾಗಿ ಬಳಕೆ ಮಾಡುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಿ, ಕಂಪ್ಯೂಟರ್ ಕೊಠಡಿಯಲ್ಲಿ ಪ್ರದರ್ಶಿಸಬೇಕು.
- ಮಕ್ಕಳು ಕಂಪ್ಯೂಟರ್ ಕೊಠಡಿಗೆ ಭೇಟಿ ನೀಡಿದ ವಿವರ ಹಾಗೂ ಕಲಿಕೆಯಲ್ಲಿ ತೊಡಗಿದ ವಿಷಯ ಕುರಿತಂತೆ ಕೆಳಕಂಡ ನಮೂನೆಯಲ್ಲಿ ವಿವರವನ್ನು ನಿರ್ವಹಿಸಬೇಕು.

| ದಿನಾಂಕ | ತರಗತಿ | ವಿಷಯ | ಹಾಜರಿದ್ದ ಮಕ್ಕಳ ಸಂಖ್ಯೆ | ಕಂಪ್ಯೂಟರ್ ಮತ್ತು ಯು.ಪಿ.ಎಸ್.ಗಳನ್ನು ಬಳಸಿದ ಅವಧಿ/ಗಂಟೆಗಳಲ್ಲಿ | ತರಗತಿ ನಿರ್ವಹಿಸಿದ ಶಿಕ್ಷಕರ ಹೆಸರು | ಶಿಕ್ಷಕರ ಸಹಿ | ಮುಖ್ಯೋಪಾಧ್ಯಾಯರ ಸಹಿ |
|---|---|---|---|---|---|---|---|
| | | | | | | | |

- ಕಂಪ್ಯೂಟರ್‌ಗಳ ಕಾರ್ಯನಿರ್ವಹಣೆಯಲ್ಲಿ ಸಮಸ್ಯೆ ಇದ್ದಲ್ಲಿ ಸಂಬಂಧಿಸಿದ ಸಂಸ್ಥೆಗೆ ದೂರು ದಾಖಲಿಸಿ, ದೂರು ದಾಖಲು ವಹಿಯಲ್ಲಿ ವಿವರ ಹಾಗೂ ದೂರು ದಾಖಲು ನೋಂದಣಿ ಸಂಖ್ಯೆ (ದೂರು ದಾಖಲು ಮಾಡಿದಾಗ ನೀಡಲಾಗುವ ಸಂಖ್ಯೆ)ಯನ್ನು ದಾಖಲಿಸುವುದು. ಪ್ರತಿ ಸಾಲಿನಲ್ಲಿ ಸರಬರಾಜು ಮಾಡಲಾದ ಕಂಪ್ಯೂಟರ್‌ಗಳ ನಿರ್ವಹಣೆ ಕುರಿತಂತೆ ವಿವರ ಕೆಳಗೆ ನೀಡಿದೆ.

**ಕಂಪ್ಯೂಟರ್‌ಗಳ ಕಾರ್ಯ ನಿರ್ವಹಣೆಯಲ್ಲಿ:**

**1. 2004-05ನೇ ಸಾಲಿನಲ್ಲಿ ಪೂರೈಸಲಾದ ಕಂಪ್ಯೂಟರ್‌ಗಳ ನಿರ್ವಹಣೆ:**

2004-05ನೇ ಸಾಲಿನಲ್ಲಿ ಮೆ// ಸೋಗೋ ಸಂಸ್ಥೆಯಿಂದ ಶಾಲೆಗಳಿಗೆ ಕಂಪ್ಯೂಟರ್‌ಗಳು ಪೂರೈಕೆಯಾಗಿದ್ದು, ಇವುಗಳ ರಿಪೇರಿಯನ್ನು ಮಾಡಿಸುವ ಸಂಬಂಧ ಜಿಲ್ಲೆಗಳಿಂದ ಬಂದಂತಹ ಬೇಡಿಕೆಯನ್ನು ಆಧರಿಸಿ ಅನುದಾನವನ್ನು 2008-09ನೇ ಸಾಲಿನಲ್ಲಿ ರಾಜ್ಯ ಕಚೇರಿಯಿಂದ ಬಿಡುಗಡೆ ಮಾಡಿರುವುದನ್ನು ಸ್ಮರಿಸಲಾಗಿದೆ. ಸದರಿ ಕಂಪ್ಯೂಟರ್‌ಗಳ ನಿರ್ವಹಣೆಗೆ ಮಾತ್ರ 2009-10ನೇ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳ ವಾರ್ಷಿಕ ಯೋಜನೆಯಲ್ಲಿ ಯೋಜಿಸಲಾಗಿದೆ. ಜಿಲ್ಲಾವಾರು ಅನುಮೋದಿತ ಮೊತ್ತ ಕೆಳಕಂಡಂತಿದ್ದು, ಈ ಅನುದಾನವನ್ನು 2004-05ನೇ ಸಾಲಿನಲ್ಲಿ ಸರಬರಾಜು ಮಾಡಲಾಗಿರುವ ಕಂಪ್ಯೂಟರ್‌ಗಳ ನಿರ್ವಹಣೆಗೆ ಬಳಕೆ ಮಾಡುವುದು.

| ಕ್ರ.ಸಂ | ಜಿಲ್ಲೆ | ಅನುದಾನದ ವಿವರ (ರೂ. ಲಕ್ಷಗಳಲ್ಲಿ) | ಕ್ರ.ಸಂ | ಜಿಲ್ಲೆ | ಅನುದಾನದ ವಿವರ (ರೂ. ಲಕ್ಷಗಳಲ್ಲಿ) |
|---|---|---|---|---|---|
| 1 | ಬಾಗಲಕೋಟೆ | 1.200 | 16 | ಹಾಸನ | 3.378 |
| 2 | ಬೆಂಗಳೂರು ಗ್ರಾಮಾಂತರ | 1.210 | 17 | ಹಾವೇರಿ | 4.000 |
| 3 | ಬೆಂಗಳೂರು ನಗರ | 2.160 | 18 | ಕೊಡಗು | 2.080 |
| 4 | ಬೆಳಗಾ೯ | 2.450 | 19 | ಕೋಲಾರ | 2.968 |
| 5 | ಬಳ್ಳಾರಿ | 3.000 | 20 | ಕೊಪ್ಪಳ | 7.200 |
| 6 | ಬೀದರ್ | 3.000 | 21 | ಮಂಡ್ಯ | 2.200 |
| 7 | ಬಿಜಾಪುರ | 2.560 | 22 | ಮೈಸೂರು | 4.000 |
| 8 | ಚಾಮರಾಜನಗರ | 2.933 | 23 | ರಾಯಚೂರು | 3.000 |
| 9 | ಚಿಕ್ಕಮಗಳೂರು | 2.500 | 24 | ಶವಮೊಗ್ಗ | 3.000 |
| 10 | ಚಿತ್ರದುರ್ಗ | 3.000 | 25 | ತುಮಕೂರು | 5.640 |
| 11 | ದಕ್ಷಿಣ ಕನ್ನಡ | 2.000 | 26 | ಉಡುಪಿ | 1.980 |
| 12 | ದಾವಣಗೆರೆ | 2.400 | 27 | ಉತ್ತರ ಕನ್ನಡ | 3.600 |
| 13 | ದಾರವಾಡ | 2.000 | 28 | ರಾಮನಗರ | 2.080 |
| 14 | ಗದಗ್ | 4.000 | 29 | ಚಿಕ್ಕಬಳ್ಳಾಪುರ | 1.500 |
| 15 | ಗುಲ್ಬರ್ಗಾ | 3.000 | | **ಒಟ್ಟು** | **84.0385** |

**2. 2006-07 ನೇ ಸಾಲಿನಲ್ಲಿ ಪೂರೈಕೆ ಮಾಡಲಾದ ಕಂಪ್ಯೂಟರ್‌ಗಳ ನಿರ್ವಹಣೆ:**

2006-07ನೇ ಸಾಲಿನಲ್ಲಿ ಮೆ//ವಿಪ್ರೋ ಸಂಸ್ಥೆಯಿಂದ ಶಾಲೆಗಳಿಗೆ ಕಂಪ್ಯೂಟರ್‌ಗಳು ಪೂರೈಕೆಯಾಗಿದ್ದು, ಇವುಗಳ ನಿರ್ವಹಣೆಯ ಜವಾಬ್ದಾರಿ ಸದರಿ ಸಂಸ್ಥೆಯದ್ದಾಗಿರುತ್ತದೆ. ಈ ಸಂಬಂಧ ಪಾವತಿಯನ್ನು ರಾಜ್ಯ ಯೋಜನಾ ಕಚೇರಿಯಿಂದ ನಿರ್ವಹಿಸಲಾಗುತ್ತದೆ. ಈ ಕಂಪ್ಯೂಟರ್‌ಗಳ ಕಾರ್ಯದಲ್ಲಿ ಯಾವುದೇ ಸಮಸ್ಯೆ ಉಂಟಾದಲ್ಲಿ ಶಾಲೆಯಿಂದ ಕರೆ ಮಾಡಬೇಕಾದ ದರ ರಹಿತ ದೂರವಾಣಿ ಸಂಖ್ಯೆ: 18003453456 ಅಥವಾ 18002003456. ಹಾಗೂ ಲಿಖಿತ ದೂರನ್ನು ಕೆಳಕಂಡ ನಮೂನೆಯಲ್ಲಿ ಶಾಲೆಗಳಿಂದ ಪಡೆದು ಜಿಲ್ಲೆಯಲ್ಲಿ ಕಂಪ್ಯೂಟರ್ ಪ್ರೋಗ್ರಾಮರ್ ಸೇವೆಯನ್ನು ಬಳಸಿಕೊಂಡು ವೆಬ್ ಸೈಟ್ http://support.wipro.co.in/new ರಲ್ಲಿ ಲಾಗ್ ಇನ್ ಐಡಿ RE855131 ಪಾಸ್ ವರ್ಡ್ school789 ಮೂಲಕ ಲಾಗ್ ಇನ್ ಆಗಿ ದೂರುಗಳನ್ನು ದಾಖಲಿಸುವುದು.

| ಶಾಲೆಯ ಹೆಸರು, ವಿಳಾಸ ಹಾಗೂ ದೂರವಾಣಿ ಸಂಪರ್ಕ ಸಂ. | ಕಂಪ್ಯೂಟರ್ ಪೂರೈಕೆಯಾದ ವರ್ಷ ಹಾಗೂ ಸರಬರಾಜು ಮಾಡಿದ ಸಂಸ್ಥೆ ವಿವರ | ಉಪಕರಣ ಕಾರ್ಯ ನಿರ್ವಹಿಸಲು ನಿಲ್ಲಿಸಿದ ದಿನಾಂಕ | ಯಾವ ಭಾಗದಲ್ಲಿ ತೊಂದರೆ ಉಂಟಾಗಿದೆ (ಕಂಪ್ಯೂಟರ್/ಯು.ಪಿ. ಎಸ್/ಇತರೆ) | ದೂರನ್ನು ನೀಡಿದ ದಿನಾಂಕ | ದೂರಿನ ನೊಂದಣಿ ಸಂಖ್ಯೆ (ಸಂಸ್ಥೆಯಿಂದ ನೀಡಲ್ಪಟ್ಟ ಸಂಖ್ಯೆ) | ಮುಖ್ಯೋಪಾಧ್ಯಾಯರ ಸಹಿ |
|---|---|---|---|---|---|---|
| | | | | | | |

**3.2007–08ನೇ ಸಾಲಿನಲ್ಲಿ ಪೂರೈಕೆ ಮಾಡಲಾದ ಕಂಪ್ಯೂಟರ್‌ಗಳ ನಿರ್ವಹಣೆ:**

2007–08ನೇ ಸಾಲಿನಲ್ಲಿ ಮೆ//ಹೆಚ್.ಸಿ.ಎಲ್ ಸಂಸ್ಥೆಯಿಂದ ಶಾಲೆಗಳಿಗೆ ಕಂಪ್ಯೂಟರ್‌ಗಳು ಪೂರೈಕೆಯಾಗಿದ್ದು, ಇವುಗಳ ನಿರ್ವಹಣೆಯ ಜವಾಬ್ದಾರಿ ಸದರಿ ಸಂಸ್ಥೆಯದ್ದಾಗಿರುತ್ತದೆ. ಈ ಸಂಬಂಧ ಪಾವತಿಯನ್ನು ರಾಜ್ಯ ಯೋಜನಾ ಕಚೇರಿಯಿಂದ ನಿರ್ವಹಿಸಲಾಗುತ್ತದೆ. ಈ ಕಂಪ್ಯೂಟರ್‌ಗಳ ಕಾರ್ಯದಲ್ಲಿ ಯಾವುದೇ ಸಮಸ್ಯೆ ಉಂಟಾದಲ್ಲಿ ಶಾಲೆಯಿಂದ ಕರೆ ಮಾಡಬೇಕಾದ ದರ ರಹಿತ ದೂರವಾಣಿ ಸಂಖ್ಯೆ: 18004250440 ಅಥವಾ ಮೊಬೈಲ್ ದೂರವಾಣಿ ಸಂ. 9980080138 ಅಥವಾ 9980080153. ಹಾಗೂ ಲಿಖಿತ ದೂರನ್ನು ಮೇಲೆ ನೀಡಲಾದ ನಮೂನೆಯಲ್ಲಿ ಶಾಲೆಗಳಿಂದ ಪಡೆದು ಜಿಲ್ಲೆಯಲ್ಲಿ ಕಂಪ್ಯೂಟರ್ ಪ್ರೋಗ್ರಾಮ ಸೇವೆಯನ್ನು ಬಳಸಿಕೊಂಡು ವೆಬ್ ಸೈಟ್ **http://blg.hclinsys.com** ರಲ್ಲಿ ಲಾಗ್ ಇನ್ ಐಡಿ hclmy ಪಾಸ್ ವರ್ಡ್ **hcl123** ಮೂಲಕ ಲಾಗ್ ಇನ್ ಆಗಿ ದೂರುಗಳನ್ನು ದಾಖಲಿಸುವುದು.

**4.2008–09ನೇ ಸಾಲಿನಲ್ಲಿ ಪೂರೈಕೆ ಮಾಡಲಾದ ಕಂಪ್ಯೂರ್‌ಗಳ ನಿರ್ವಹಣೆ:**

2008–09ನೇ ಸಾಲಿಗೆ ಮೆ//ಬಿ.ಇ.ಎಲ್ ಸಂಸ್ಥೆಗೆ ಕಂಪ್ಯೂಟರ್‌ಗಳ ಸರಬರಾಜಿಗೆ ಕಾರ್ಯಾದೇಶವನ್ನು ನೀಡಲಾಗಿದೆ. ಸದರಿ ಸಂಸ್ಥೆಯು ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಿ ಅಳವಡಿಸಿದನಂತರ ಇದರ ನಿರ್ವಹಣೆ ಕುರಿತಂತೆ ರಾಜ್ಯ ಯೋಜನಾ ಕಚೇರಿಯಿಂದ ಪ್ರತ್ಯೇಕ ಸುತ್ತೋಲೆಯನ್ನು ನೀಡಲಾಗುವುದು.

**ರಾಜ್ಯ ಯೋಜನಾ ನಿರ್ದೇಶಕರು**
**ಸರ್ವ ಶಿಕ್ಷಣ ಅಭಿಯಾನ**

**<u>ಇವರಿಗೆ</u>**

1) ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಕಾರ್ಯಕ್ರಮಗಳು) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಇವರಿಗೆ ಕ್ರಮಕ್ಕಾಗಿ.
2) ಎಲ್ಲಾ ಜಿಲ್ಲೆಗಳ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಕ್ರಮಕ್ಕಾಗಿ
3) ಎಲ್ಲಾ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಂಪನ್ಮೂಲ ಸಮನ್ವಯಾಧಿಕಾರಿಗಳು. ಕ್ರಮಕ್ಕಾಗಿ

**<u>ಇವರಿಗೆ ಮಾಹಿತಿಗೆ ಮತ್ತು ಮುಂದಿನ ಕ್ರಮಕ್ಕೆ</u>**

4) ಅಪರ ಆಯುಕ್ತರು, ಆಯುಕ್ತಾಲಯ, ಧಾರವಾಡ / ಗುಲ್ಬರ್ಗ.
5) ನಿರ್ದೇಶಕರು (ಪ್ರಾಥಮಿಕ) / (ಪ್ರೌಢ)/ಮೈನಾರಿಟಿ/ಡಿಎಸ್‌ಇಆರ್‌ಟಿ/ ಸ.ಶಿ.ಅ. ಆಯುಕ್ತಾಲಯ, ಧಾರವಾಡ/ಗುಲ್ಬರ್ಗ.
6) ಸಹ ನಿರ್ದೇಶಕರು, ಬೆಳಗಾಂ / ಮೈಸೂರು.
7) ಪ್ರಾಂಶುಪಾಲರು, ಸಿಟಿಇ, ಬೆಳಗಾಂ/ ಗುಲ್ಬರ್ಗ/ಚಿತ್ರದುರ್ಗ/ಮೈಸೂರು/ಮಂಗಳೂರು/ಜಮಖಂಡಿ
8) ಸರ್ವ ಶಿಕ್ಷಣ ಅಭಿಯಾನ ರಾಜ್ಯ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಹಾಗೂ ಸಮಾಲೋಚಕರಿಗೆ.

**<u>ಇವರಿಗೆ ಪ್ರತಿಯನ್ನು ಸಲ್ಲಿಸಿದೆ.</u>**

9) ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು.
10) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.